ಸಾಕ್ಷಿಯನ್ನು ದಿನಾಂಕ **23-08-2024** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ.ಕೆ. ವಕೀಲರಿಂದ.

ನಮ್ಮ ತಂದೆಗೆ ಎಷ್ಟು ಜನ ಅಣ್ಣ-ತಮ್ಮಂದಿರು ಎಂದರೆ ಸಾಕ್ಷಿಯು ಇಬ್ಬರು ಅಣ್ಣಂದಿರು ಮತ್ತು ಒಬ್ಬಳು ಅಕ್ಕ ಎಂದು ಹೇಳುತ್ತಾಳೆ. ನೀವು ಮೂಲತಃ ರಿಪ್ಪನ್ ಪೇಟೆಯವರಾ ಅಥವಾ ಬೇರೆ ಕಡೆಯಿಂದ ಇಲ್ಲಿಗೆ ಬಂದಿದ್ದೀರಾ ಎಂದರೆ**?** ಸಾಕ್ಷಿಯು ನಾವು **4** ಜನ ರಿಪ್ಪನ್ ಪೇಟೆ ಯಲ್ಲಿ ಹುಟ್ಟಿ ಬೆಳೆದಿದ್ದೇವೆ ಎಂದು ಹೇಳುತ್ತಾರೆ. ರಿಪ್ಪನ್ ಪೇಟೆಯಲ್ಲಿ ನಾವು ಎಲ್ಲಿ ಹುಟ್ಟಿ ಬೆಳೆದಿರುತ್ತೇವೆ ಎಂದರೆ**?** ಸಾಕ್ಷಿಯು ಶಿವಮೊಗ್ಗ ರಸ್ತೆಯಲ್ಲಿ ರಿಪ್ಪನ್ ಪೇಟೆಯಲ್ಲಿ ಗ್ರಾಮ ಪಂಚಾಯಿತಿ ಕಛೇರಿಯ ಪಕ್ಕದ ಮನೆಯಲ್ಲಿ ನಾವು ಹುಟ್ಟಿ ಬೆಳೆದಿರುತ್ತೇವೆ ಎಂದು ಹೇಳುತ್ತಾರೆ. ಸದರಿ ಮನೆ ನಮ್ಮ ತಂದೆಯ ಬಾಡಿಗೆ ಮನೆಯಾಗಿರುತ್ತದೆ. ನಾವು ಲೋಕನಾಥಪುರ ವಾಸಿ ಜೆ. ಮಹಾಬಲಯ್ಯರವರಿಂದ ನಿವೇಶನವನ್ನು ಕ್ರಯಕ್ಕೆ ತೆಗೆದುಕೊಂಡಿರುತ್ತೇವೆ ಎಂದರೆ ಸರಿ. ಸದರಿ ನಿವೇಶನವನ್ನು ನಾವು **2003** ರಲ್ಲಿ ಕ್ರಯಕ್ಕೆ ತೆಗೆದುಕೊಂಡಿರುತ್ತೇವೆ ಎಂದು ಕೇಳಿ ಸಾಕ್ಷಿಗೆ ಒಂದು ಕ್ರಯಪತ್ರದ ದೃಢೀಕೃತ ನಕಲನ್ನು ತೋರಿಸಿದ್ದು ಸಾಕ್ಷಿಯು ಅದನ್ನು ಒಪ್ಪಿಕೊಂಡಿರುವುದರಿಂದ ಅದನ್ನು ನಿ.ಡಿ.**-1** ಎಂದು ಗುರುತಿಸಲಾಯಿತು. ಸದರಿ ನಿ.ಡಿ.**-1** ರಲ್ಲಿ ತೋರಿಸಿರುವ ಸ್ವತ್ತಿನಲ್ಲಿ ಮಧ್ಯಭಾಗದ ನಿವೇಶನವನ್ನು ನಾನು ಖರೀದಿಸಿದ್ದು ಸದರಿ ನಿವೇಶನದ ಅಕ್ಕ ಮತ್ತು ಪಕ್ಕದ ನಿವೇಶನಗಳನ್ನು ನನ್ನ ಸಹೋದರರು ಖರೀದಿಸಿರುತ್ತಾರೆ ಎಂದರೆ ಸರಿ. ನಮ್ಮ

ಸಹೋದರರಿಗೂ ಸಹ ನೊಂದಾಯಿತ ಕ್ರಯ ಪತ್ರ ಆಗಿರುತ್ತದೆ ಎಂದರೆ ಸರಿ. **2003** ರಲ್ಲಿ ನಾನು ನಿವೇಶನ ಕ್ರಯಕ್ಕೆ ತೆಗೆದುಕೊಂಡ ನಂತರ ಗ್ರಾಮ ಪಂಚಾಯಿತಿಯಲ್ಲಿ ಕಂದಾಯ ಪಾವತಿ ಮಾಡಿರುತ್ತೇವೆ. ನಿ.ಡಿ.**-1** ರಂತೆ ನಾನು ಕ್ರಯಕ್ಕೆ ತೆಗೆದುಕೊಂಡಿರುವ ಸ್ವತ್ತಿನಲ್ಲಿ ವಾಸದ ಮನೆ ಕೂಡ ಇದೆ ಎಂದರೆ ಸರಿ. ಸಾಕ್ಷಿಗೆ ಈಗ ಎರಡು ಡಿಮಾಂಡ್ ರಿಜಿಸ್ಟರ್ ಗಳ ನಕಲುಗಳನ್ನು ತೋರಿಸುತ್ತಿದ್ದು ಸದರಿ ಎರಡು ನಕಲುಗಳಲ್ಲಿ ನನ್ನ ಹೆಸರು ಇದೆಯಾ ಎಂದರೆ**?** ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿರುವುದರಿಂದ ಸದರಿ ಎರಡು ನಕಲುಗಳನ್ನು ನಿ.ಡಿ.**-2** ಮತ್ತು **3** ಎಂದು ಗುರುತಿಸಲಾಯಿತು. ನಿ.ಡಿ.**-2** ಮತ್ತು **3** ರಲ್ಲಿ ನಮೂದಿಸಿರುವ ನನ್ನ ಸ್ವತ್ತಿನಲ್ಲಿ ಅಂಚೆ ನಮೂನೆ ಇದ್ದು ವಿದ್ಯುತ್‌ಚಕ್ತಿ ಸಂಪರ್ಕ ಇದೆ.

ನನ್ನ ನಿವೇಶನದ ಚೆಕ್ಕುಬಂದಿ ಹೇಳುತ್ತಿರಾ ಎಂದರೆ**?** ಸಾಕ್ಷಿಯು ನಾನು ಕ್ರಯಕ್ಕೆ ತೆಗೆದುಕೊಳ್ಳುವಾಗ ಸದರಿ ನಿವೇಶನದ ಚೆಕ್ಕುಬಂದಿ ಪೂರ್ವಕ್ಕೆ ವಿ.ಪಿ. ರಸ್ತೆ, ಪಶ್ಚಿಮಕ್ಕೆ ಸರ್ವೇ ನಂ.**49** ರ ಗಡಿ, ಉತ್ತರ ಮತ್ತು ದಕ್ಷಿಣಕ್ಕೆ ಜೆ. ಮಹಾಬಲಯ್ಯರವರ ಉಳಿದ ಜಾಗ ಎಂದು ಹೇಳುತ್ತಾರೆ. ಸಾಕ್ಷಿಯು ಮುಂದುವರಿದು ಸದರಿ ನನ್ನ ನಿವೇಶನದ ಈಗ ಚೆಕ್ಕು ಬಂದಿ ಬದಲಾಗಿರುತ್ತದೆ ಎಂದು ಹೇಳುತ್ತಾರೆ. ಸದರಿ ಸ್ವತ್ತಿನ ಈಗಿನ ಚೆಕ್ಕುಬಂದಿ ಪೂರ್ವಕ್ಕೆ ವಿ.ಪಿ. ರಸ್ತೆ, ಪಶ್ಚಿಮಕ್ಕೆ ಸರ್ವೇ ನಂ.**49** ರಲ್ಲಿ ನಮಗೆ ಮಂಜೂರಾಗಿರತಕ್ಕಂತಹ ಜಾಗ ಮತ್ತು ಮನೆ. ಉತ್ತರಕ್ಕೆ ಜೆ. ಮಹಾಬಲಯ್ಯರವರ ಜಾಗವನ್ನು ಮನುಕುಮಾರ್ ರವರು ಕ್ರಯಕ್ಕೆ

ತೆಗೆದುಕೊಂಡಿರುತ್ತಾರೆ ನಂತರ ಸದರಿ ಮನುಕುಮಾರ್ ರವರಿಂದ ಸದರಿ ಜಾಗವನ್ನು ನನ್ನ ಹೆಂಡತಿ ಕ್ರಯಕ್ಕೆ ತೆಗೆದುಕೊಂಡಿರುತ್ತಾರೆ ಹಾಗೂ ದಕ್ಷಿಣಕ್ಕೆ ಪ್ರತಿವಾದಿಯು ಜೆ. ಮಹಾಬಲಯ್ಯರವರಿಂದ ಕ್ರಯಕ್ಕೆ ತೆಗೆದುಕೊಂಡಿರುವ ಜಾಗ ಎಂದು ಹೇಳುತ್ತಾರೆ. **2003** ರಲ್ಲಿ ನಾನು ನಿವೇಶನ ಕ್ರಯಕ್ಕೆ ತೆಗೆದುಕೊಳ್ಳುವುದಕ್ಕಿಂತ ಮುಂಚೆ ನನ್ನ ಹೆಸರಿನಲ್ಲಿ ಯಾವುದೇ ನಿವೇಶನ ಇರಲಿಲ್ಲ ಎಂದರೆ ಸರಿ. ನಾನು ಜೆ. ಮಹಾಬಲಯ್ಯ ರವರಿಂದ ಮನೆ ಮತ್ತು ನಿವೇಶನವನ್ನು ಖರೀದಿಸಿರುತ್ತೇನೆ. ಈಗ ನನ್ನ ಹಾಲಿ ಆಧಾರ್ ಕಾರ್ಡ್ ನಲ್ಲಿ, ಪಡಿತರಿ ಚೀಟಿಯಲ್ಲಿ ನಿ.ಡಿ.**-2** ಮತ್ತು **3** ರಲ್ಲಿ ಇರುವ ನನ್ನ ಸ್ವತ್ತಿನ ಡಿ.ಆರ್. ನಂಬರ್ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದ ನನ್ನ ಮನೆ ಡಿ.ಆರ್. ನಂಬರ್ ನಲ್ಲಿಯೂ ಇದೆ ಮತ್ತು ಸರ್ವೇ ನಂಬರ್ **49** ರಲ್ಲಿಯೂ ಇದೆ ಎಂದು ಹೇಳುತ್ತಾರೆ. ನಿ.ಡಿ.**-2** ಮತ್ತು **3** ರಲ್ಲಿರುವ ನನ್ನ ಮನೆ ಮತ್ತು ದಾವಾ ಬಿ ಶೆಡ್ಯೂಲ್ ಸ್ವತ್ತು ಒಂದಕ್ಕೊಂದು ತಾಗಿಕೊಂಡಿರುತ್ತವೆ. ದಾವಾ ಬಿ ಶೆಡ್ಯೂಲ್ ಸ್ವತ್ತಿನ ಯಾವ ದಿಕ್ಕಿಗೆ ನಾನು **2003** ರಲ್ಲಿ ಖರೀದಿಸಿರುವ ಸ್ವತ್ತು ಬರುತ್ತದೆ ಎಂದರೆ**?** ಸಾಕ್ಷಿಯು ದಾವಾ ಬಿ ಶೆಡ್ಯೂಲ್ ನಿಂದ ಉತ್ತರ ಮತ್ತು ಪೂರ್ವ ದಿಕ್ಕಿನ ಮಧ್ಯಭಾಗದಲ್ಲಿ ಬರುತ್ತದೆ ಎಂದು ಹೇಳುತ್ತಾರೆ. ದಾವಾ ಎ ಅನುಸೂಚಿ ಸ್ವತ್ತಿನ ಚೆಕ್ಕುಬಂದಿಗೂ ಮತ್ತು ನಿ.ಪಿ.**-1** ರಲ್ಲಿರುವ ಚೆಕ್ಕುಬಂದಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಎ ಸ್ವತ್ತಿನ ಚೆಕ್ಕುಬಂದಿಯಲ್ಲಿ ಪೂರ್ವಕ್ಕೆ ಮನುಕುಮಾರ್ ರವರ ಹೆಸರು ಇಲ್ಲಾ ಎಂದರೆ**?** ಸಾಕ್ಷಿಯು ನಾನು ದಾವೆ ಸಲ್ಲಿಸುವಾಗ ಸದರಿ

ಅನುಸೂಚಿ ಸ್ವತ್ತಿನ ಪೂರ್ವ ದಿಕ್ಕಿನ ಸ್ವತ್ತನ್ನು ಮನುಕುಮಾರ್ ರವರಿಂದ ನನ್ನ ಹೆಂಡತಿ ಕ್ರಯಕ್ಕೆ ತೆಗೆದುಕೊಂಡಿದ್ದರು ಎಂದು ಹೇಳುತ್ತಾರೆ. ನನ್ನ ಹೆಂಡತಿ ಮನುಕುಮಾರ್ ರಿಂದ ಸ್ವತ್ತನ್ನು ಕ್ರಯಕ್ಕೆ ತೆಗೆದುಕೊಂಡಿರುವ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿದ್ದೀರಾ ಎಂದರೆ**?** ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ. ನಾನು ಆ ರೀತಿಯ ಯಾವುದೇ ದಾಖಲೆಯನ್ನು ಹಾಜರು ಪಡಿಸದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ನೆನಪಿಲ್ಲ.

ನನಗೆ ನಿ.ಪಿ.**-1** ರಂತೆ ಹಕ್ಕು ಪತ್ರ ಕೊಡುವುದಕ್ಕಿಂತ ಮುಂಚೆ ದಾವಾ ಎ ಮತ್ತು ಬಿ ಅನುಸೂಚಿ ಸ್ವತ್ತುಗಳಿಗೆ ಕಂದಾಯ ಕಟ್ಟಿದ್ದೀರಾ ಎಂದರೆ**?** ಸಾಕ್ಷಿಯು ಕಂದಾಯ ಕಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ಒಂದು ವೇಳೆ ಹಕ್ಕು ಪತ್ರ ಕೊಡುವುದಕ್ಕಿಂತ ಮುಂಚೆ ದಾವಾ ಎ ಮತ್ತು ಬಿ ಅನುಸೂಚಿ ಸ್ವತ್ತುಗಳು ಅಸ್ತಿತ್ವದಲ್ಲಿ ಇದ್ದರೆ ಕಂದಾಯ ಇರುತ್ತಿತ್ತು ಸದರಿ ಎರಡೂ ಸ್ವತ್ತುಗಳು ಅಸ್ತಿತ್ವದಲ್ಲಿ ಇರುವುದಿಲ್ಲವಾದ್ದರಿಂದ ನಾನು ಯಾವುದೇ ಕಂದಾಯ ಕಟ್ಟಿರುವುದಿಲ್ಲ ಎಂದರೆ ಸರಿ. ನನಗೆ ನಿ.ಪಿ.**-1** ರಂತೆ ಹಕ್ಕು ಪತ್ರ ಕೊಡುವುದಕ್ಕಿಂತ ಮುಂಚೆ ಸ್ಥಳ ಪರಿಶೀಲನೆಗಾಗಿ ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ತನಿಖೆ ಮಾಡಿ ವರದಿ ಕೊಟ್ಟಿರುವ ಬಗ್ಗೆ ಯಾವುದಾದರೂ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ**?** ಸಾಕ್ಷಿಯು ಹಾಜರು ಪಡಿಸಿರುವುದಿಲ್ಲ ಎಂದು ಹೇಳುತ್ತಾರೆ. ನಿವೇಶನ ಮಂಜೂರು ಕೋರಿ

ನಾನು ಕೊಟ್ಟಂತಹ ಅರ್ಜಿ**,** ಸ್ಥಳ ಮಹಜರ್ ಮತ್ತು ನಕ್ಷೆಯ ದೃಢೀಕೃತ ನಕಲುಗಳನ್ನು ಈ ದಾವೆಯಲ್ಲಿ ಹಾಜರು ಪಡಿಸಿರುವುದಕ್ಕೆ ನನಗೆ ಯಾವುದೇ ತೊಂದರೆ ಇಲ್ಲಾ ಎಂದರೆ**?** ಸಾಕ್ಷಿಯು ನಾನು ಸದರಿ ದಾಖಲೆಗಳನ್ನು ಅರ್ಜಿ ಸಲ್ಲಿಸಿ ಇನ್ನೂ ಪಡೆದುಕೊಂಡಿರುವುದಿಲ್ಲ**,** ಪಡೆದುಕೊಂಡು ಹಾಜರು ಪಡಿಸಿರುತ್ತೇನೆ ಎಂದು ಹೇಳುತ್ತಾರೆ**.**

<u>ಮರು ವಿಚಾರಣೆ:**-** ಇಲ್ಲ**.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

**(**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ**.)**

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.